Sri K Jayaprakash Hegde They have advertised that Government of India has recognised it

Sri K R Ramesh Kumar He is misleading the public You must immediately initiate action, get the information ಅವರಿಗೆ ರೆಕಗ್ನಷನ್ ಇಲ್ಲದೇ, ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದರೆ, you must take criminal action against that fellow that fellow Can the Government plead helplessness? ಎಲ್ಲಾದರೂ ಉಂಟೆ, You can't wait for a complaint from the parents You should immediately suomoto start the action Get the information telephonically from your officers whether that institution has the recognisition ಅವರಿಗೆ ರೆಕಗ್ನಿಷನ್ ಇಲ್ಲವೆಂದರೆ, by this evening you must initiate criminal action against them

ಶ್ರೀ ಡಿ ಮಂಜುನಾಥ ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರ ಸಲಹೆ ಪ್ರಕಾರ, ಇವತ್ತಿನ ದಿವಸ ತಕ್ಷಣ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇವೆ

ಶ್ರೀ ಎಂ ಪಿ ಪ್ರಕಾಶ್ ಅದಕ್ಕೆ ಪೂರಕವಾಗಿ ನಾನು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿದ ಮಾತಿಗೆ ..

ಅಧ್ಯಕ್ಷರು ಗಂಭೀರವಾದ ಸಮಸ್ಯೆಯನ್ನು ಮಾನ್ಯ ಹೆಗ್ಡೆಯವರು ಎತ್ತಿದ್ದಾರೆ ಅನೇಕ, ಜನ, ಅನೇಕ ರೀತಿಯಲ್ಲಿ, ಈ ದೇಶದಲ್ಲಿ ಸರ್ಕಾರಗಳೇ ಇಲ್ಲವೆನ್ನುವ ರೀತಿಯಲ್ಲಿ ಸಂಘ-ಸಂಸ್ಥೆಗಳು .. ಇವೆಲ್ಲಾ ಮಾಡುತ್ತಿವೆ ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು

ಶ್ರೀ ಎಂ ಪಿ ಪ್ರಕಾಶ್ ಹಿಂದೆ ವಿಧಾನ ಸೌಧ ಹಿನ್ನೆಲೆಯನ್ನಿಟ್ಟುಕೊಂಡು ಒಬ್ಬ ಮಹನೀಯ ತಾಂತ್ರಿಕ ವಿದ್ಯಾಲಯವನ್ನು ಮಾಡುತ್ತೇನೆ ಎಂಬ ಹೇಳಿಕೆ ಕೊಟ್ಟಿದ್ದಿತ್ತು ಅದೇ ರೀತಿ, ವೈಟ್‌ಫೀಲ್ಡ್ ಹತ್ತಿರ ಡೇರಿ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರಾಯಶಃ ಕೃಷಿ ವಿಶ್ವವಿದ್ಯಾಲಯ ಬಿಟ್ಟರೆ ಬೇರೆ ಯಾರೂ ಪ್ರಾರಂಭ ಮಾಡಬಾರದೆಂದು ಇದ್ದಾಗಲೂ ಕೂಡ ಅದರಲ್ಲಿ ನಾನು ಶಿಕ್ಷಣವನ್ನು ಕೊಡುತ್ತೇನೆಂದು ಹೇಳಿ ಪ್ರಚಾರ ಮಾಡಿದ್ದಿತ್ತು ಅವರ ಮೇಲೆ ಹಿಂದೆ ಕ್ರಮ ತೆಗೆದುಕೊಂಡಿದ್ದೇವೆ ಈಗ ಸಿ ಇ ಟಿ ಗೊಂದಲವಿರುವುದರಿಂದ ಕೆಲವು ಜನ ಮುಗ್ಧ ಬಾಲಕರನ್ನು ದಾರಿ ತಪ್ಪಿಸುವ ರೀತಿಯಲ್ಲಿ ಶೋಷಣೆಗಳನ್ನು ಮಾಡಿರುತ್ತಾರೆ ಇದಕ್ಕೆ ಪ್ರಾಯಶಃ ಯಾವ ವಿಶ್ವವಿದ್ಯಾಲಯವೂ ಕೂಡ ಮಾನ್ಯತೆ ಕೊಡಲಿಕ್ಕೆ ಸಾಧ್ಯವೇ ಇಲ್ಲ ಅದಕ್ಕೆ ತತ್ಸಮಾನವಾದ ಎ ಎಂ ಐ ಇ ಎಂಬ ಕೋರ್ಸ್ ಇದೆ ಅದು ಬಿ ಇ.ಗೆ ತತ್ಸಮಾನವಾದದ್ದೆಂದು ಹೇಳಿ ಸರ್ಕಾರದ ಮಾನ್ಯತೆ ಪಡೆದಿರುವ ಕೋರ್ಸ್ ಬಿಟ್ಟರೆ, ಉಳಿದಿದ್ದು ಇಲ್ಲ ಆ ಕಾರಣಕ್ಕಾಗಿ ತಾವು ಏನು ಹೇಳಿದ್ದೀರಿ ಅದಕ್ಕೆ ಉನ್ನತ ಶಿಕ್ಷಣ ಸಚಿವರು ಈ ದಿವಸವೇ ಅವರನ್ನು ಕರೆಸಿ ಮಾತನಾಡಿ, ಅವರು ಯಾರೇ ಆಗಿರಲಿ, ಮೋಸ ಮಾಡುವ ಈ ಜನರನ್ನು 420 ಎಂದೇ ನಾವು ಪರಿಭಾವಿಸುತ್ತೇವೆ ಐ ಪಿ.ಸಿ ಕೆಳಗೇ ರಿಜಿಸ್ಟರ್ ಮಾಡುತ್ತೇವೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ವಿಷಯ (ಚ) ರೇಷ್ಮೆ ಧಾರಣೆ ಕುಸಿತದಿಂದ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ಆರ್ ಧ್ರುವನಾರಾಯಣ್ (ಸಂತೇಮಾರನಹಳ್ಳಿ) ರೇಷ್ಮೆ ಕೃಷಿ ಇವತ್ತು ಭಾರತ ದೇಶದಲ್ಲಿ ಕರ್ನಾಟಕ ರಾಜ್ಯ ಮೊದಲನೇ ರಾಜ್ಯವಾಗಿದೆ ಇವತ್ತು ವಿಷಾದದ ಸಂಗತಿ ಎಂದರೆ,

ರೇಷ್ಮೆಗೂಡಿನ ದರ ಬಹಳ ಕುಸಿತಕ್ಕೆ ಈಡಾಗಿ ನಮ್ಮ ರಾಜ್ಯದ ರೈತರು ಸಂಕಷ್ಟಕ್ಕೀಡಾಗಿದ್ದಾರೆ ಮೇ ತಿಂಗಳಲ್ಲಿ ಸಣ್ಣಗೂಡಿನ ದರ 70ರಿಂದ 80 ರೂಪಾಯಿ ಇತ್ತು ಅದೇ ರೀತಿ, ಏಪ್ರಿಲ್‌ನಲ್ಲಿ ಕೂಡ ಒಳ್ಳೆಯ ಧಾರಣೆ ಇತ್ತು ಆದರೆ, ಜೂನ್ ತಿಂಗಳಲ್ಲಿ ಆ ರೇಷ್ಮೆ ಗೂಡಿನ ಧಾರಣೆ ಬಹಳ ತಳ ಮಟ್ಟಕ್ಕೆ ಹೋಗಿ, ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ ಸರ್ಕಾರವನ್ನು ನಾನು ಮನವಿ ಮಾಡಿಕೊಳ್ಳುವುದೆಂದರೆ, ಸಣ್ಣ ಗೂಡಿಗಾಗಲಿ, ದಪ್ಪ ಗೂಡಿಗಾಗಲಿ ಮಿನಿಮಂ ಪ್ರೈಸ್ ಫಿಕ್ಸ್ ಮಾಡಬೇಕು ಬೆಲೆ ಕುಸಿದಾಗ ಅದಕ್ಕೆ ಸರ್ಕಾರ ಬೆಂಬಲ ಬೆಲೆ ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಈ ಬೆಂಬಲ ಬೆಲೆಯನ್ನು ವೈಜ್ಞಾನಿಕ ಬೆಲೆಯನ್ನು ಕೊಡಬೇಕೆನ್ನುವುದೇ ನಮ್ಮ ಸರ್ಕಾರದ ಉದ್ದೇಶ ಆ ಕಾರಣಕ್ಕಾಗಿ ಹಿಂದೆ 400 ಕೋಟಿ ರೂಪಾಯಿಯ ಒಂದು ಆವರ್ತ ನಿಧಿಯನ್ನು ಏರ್ಪಾಟು ಮಾಡಿದ್ದೇವೆ. ಶಂಕರ್‌ಸಿಂಗ್ ವಘೇಲಾ, ಕೇಂದ್ರದ ಮಂತ್ರಿಗಳು ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಅವರ ಜೊತೆ ಪ್ರಸ್ತಾಪ ಮಾಡಿದ್ದಾರೆ ಬೈವೋಲ್ಟೀನ್ ಆಗಿರುವ ತಳಿ ಆಗಬಹುದು, ದಕ್ಷಿಣ ಕೊರಿಯ, ಥೈವಾನ್, ಜಪಾನ್‌ನಿಂದ ಬಹಳ ತೀವ್ರವಾದಂಥ ಸ್ಪರ್ಧೆಯನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಇದೊಂದು ಡಂಪಿಂಗ್ ಯಾರ್ಡ್ ಆಗಿರುವ ಪರಿಸ್ಥಿತಿ ಇದೆ ಆ ಕಾರಣಕ್ಕೆ ನಮ್ಮ ರೇಷ್ಮೆ ಬೆಳೆಗಾರರ ಸಂಕಷ್ಟ ಸ್ಥಿತಿಯನ್ನು ಮಾನ್ಯ ಶಾಸಕರು ಏನು ಗಮನಕ್ಕೆ ತಂದಿದ್ದೀರಿ, ಅದರ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸಿ, ಶೀಘ್ರದಲ್ಲಿ ಸರ್ಕಾರ ಯಾವ ರೀತಿ ಪರಿಹಾರ ಮಾಡಬೇಕೆನ್ನುವ ಬಗ್ಗೆ ಚರ್ಚೆ ಮಾಡಿ, ನಿರ್ಧಾರ ತೆಗೆದುಕೊಳ್ಳುತ್ತೇವೆ

ಶ್ರೀ ಆರ್ ಧ್ರುವನಾರಾಯಣ್ ಚೈನಾ ಸಿಲ್ಕ್ ಎಂದು ಇದೆ ಅದನ್ನು ಬ್ಯಾನ್ ಮಾಡಬೇಕು ಅದನ್ನು ಬ್ಯಾನ್ ಮಾಡಿದರೆ ನಮ್ಮ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ ಚೈನಾ ಸಿಲ್ಕ್ ಕಳ್ಳಸಾಗಾಣಿಕೆ ಮಾಡುವುದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ವಿಶ್ವ ವಾಣಿಜ್ಯ ಒಪ್ಪಂದ (ಡಬ್ಲ್ಯುಟಿಓ)ಕ್ಕೇ ನಾವು ಸಹಿ ಹಾಕಿರುವುದರಿಂದ, ಯಾವುದೇ ದೇಶದಿಂದ ಬರುವ 750 ಐಟೆಂಗಳು ಏನಿವೆ, ಅವುಗಳನ್ನು ನಾವು ಬ್ಯಾನ್ ಮಾಡಲಿಕ್ಕೆ ಬರುವುದಿಲ್ಲ ಆದರೆ, ಅದಕ್ಕೆ ಬೇಕಾಗಿರುವಂಥ ರಕ್ಷಣಾತ್ಮಕ ಕ್ರಮಗಳನ್ನು ಹೇಗೆ ಕೈಗೊಳ್ಳಬೇಕು, ಅದಕ್ಕೆ ತೆರಿಗೆಗಳನ್ನು ಯಾವ ರೀತಿ ಹಾಕಬೇಕೆನ್ನುವ ವಿಚಾರದ ಬಗ್ಗೆ ಮಾನ್ಯ ಶಂಕರ್‌ಸಿಂಗ್ ವಘೇಲಾರವರು, ರೇಷ್ಮೆ ಮಂತ್ರಿಗಳು, ಕೇಂದ್ರಸರ್ಕಾರದಿಂದ ಬಂದಿದ್ದರು ಅವರ ಜೊತೆ ಮಾತನಾಡಿದ್ದೇವೆ ಇಲ್ಲಿ ನಮ್ಮ ರೇಷ್ಮೆ ಮಹಾಮಂಡಲ ಕೇಂದ್ರ ಕಛೇರಿ ಕೂಡ ಇರುವುದರಿಂದ ಅದರ ಬಗ್ಗೆ ಕೂಡ ನಾವು ಕ್ರಮ ಕೈಗೊಳ್ಳುತ್ತೇವೆ ಈ ಸಲಹೆ ಹಿನ್ನೆಲೆಯಲ್ಲಿ ಯಾವ ರೀತಿ ರಕ್ಷಣಾತ್ಮಕ ಕ್ರಮಗಳನ್ನು ನಮ್ಮ ರೈತರ ಪರವಾಗಿ ತೆಗೆದುಕೊಳ್ಳಬೇಕೆನ್ನುವ ನಿರ್ಧಾರ ಮಾಡುತ್ತೇವೆ

ವಿಷಯ (ಛ) ಹಿರೇಕೆರೂರಿನಲ್ಲಿ ರೈತರಿಗೆ ಬರ ಬೇಕಾದ ಬೆಳೆ ವಿಮೆ ಹಾಗೂ ತುಂಗಭದ್ರಾ ಮೇಲ್ದಂಡೆಗಾಗಿ ಭೂಮಿ ಸ್ವಾಧೀನ ಪಡಿಸಿಕೊಂಡ ಹಣವನ್ನು ಸಕ್ಕರೆ ಕಾರ್ಖಾನೆ ಶೇರಿಗೆ ಮುರಿದು ಕೊಳ್ಳುವುದನ್ನು ನಿಲ್ಲಿಸುವ ಬಗ್ಗೆ

†ಶ್ರೀ ಬಿ ಸಿ ಪಾಟೀಲ್ (ಹಿರೇಕೆರೂರು) ಮೊದಲನೆಯದಾಗಿ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ ಅದಕ್ಕೆ ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ 16ನೇ ತಾರೀಖು ನಾನು ಒಂದು ಪ್ರಶ್ನೆ ಕಳುಹಿಸಿಕೊಟ್ಟಿದ್ದೆ. ಹಿರೇಕೆರೂರು ತಾಲ್ಲೂಕಿನಲ್ಲಿ 1996–97ನೇ ಇಸವಿಯಿಂದ ಸಕ್ಕರೆ